ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ನಮಗಿದ್ದ ಅವಕಾಶವನ್ನನುಸರಿಸಿ ಕೊಡಲಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಿಂದೆ ಹಲ್ಲರ್ ನಡೆಯುತ್ತಿದ್ದವರಿಗೆ ಅದನ್ನು ನಿರ್ಬಂಧವಾಗಿ ನಿಲ್ಲಿಸ ಬೇಕೆಂದು ಆರ್ಡರುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಿಂದೆ ಕೊಟ್ಟಿದ್ದವರಿಗೆ ನಿಲ್ಲಿಸಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯಾ ಸರ್ಕಾರದ ನಿರ್ಬಂಧವಿರುವುದರಿಂದ, ಆಗುವ ತೊಂದರೆಯನ್ನು ತಪ್ಪಿಸಲು ಈಗ ಆ ನಿರ್ಬಂಧ ಅನಾವಶ್ಯಕ, ಅದನ್ನು ತೆಗೆಯಬೇಕು ಎಂಬ ಸರ್ಕಾರದ ನೀತಿಗನುಸಾರವಾಗಿ ಆದಷ್ಟು ಜಾಗ್ರತೆ ತೆಗೆದು ಜಾಗ್ರತೆ ಕೊಡಲು ಅವಕಾಶ ಮಾಡಲಾಗುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗ ಲೈಸೆನ್ಸ್ ಕೊಟ್ಟಿರುವ ಕಡೆ ಬೇರೆಯವರಿಗೆ ಅವಕಾಶಕೊಟ್ಟಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಟ್ಟಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗೆ ಹೊಸಬರಿಗೆ ಅವಕಾಶಕೊಟ್ಟು ಹಳಬರಿಗೆ ಕೊಡದಿರುವುದಕ್ಕೆ ಕಾರಣವೇನು?

Sri H. SIDDAVEERAPPA.—I have already submitted, the Government of India order restrains the issue of licence. I have written to them to give permission.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಮನೆಯಲ್ಲಿ ಕೊಟ್ಟಣ ಕುಟ್ಟುವುದಕ್ಕಿಂತ ಹಲ್ಲರನಲ್ಲಿ ಬತ್ತ ಕುಟ್ಟುವುದರಿಂದ ನಷ್ಟವೆಂದು ತಾನೆ ಸರ್ಕಾರದವರು ಈ ರೀತಿಯಾಗಿ ನಿರ್ಬಂಧ ಮಾಡಿರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಎರಡು ಕಾರಣಗಳಿವೆ. ಈಗ ಫುಡ್ ರೆಸ್ಟ್ರಿಕ್ಷ್ ಆರ್ಡರು ಪ್ರಕಾರ ಹಲ್ಲರಿಗೆ ಕೊಟ್ಟರೆ ಅಕ್ಕಿ ಹೆಚ್ಚು ಪಾಲಿಷ್ ಆಗುವುದರಿಂದ ಕಡಮೆ ಬರುತ್ತದೆ, ಇದರಿಂದ ನಷ್ಟವಾಗುತ್ತದೆ, ಅಕ್ಕಿಯಲ್ಲಿರುವ ಸಾರ ಕಡಮೆಯಾಗುತ್ತದೆ ಎಂಬ ಕಾರಣಗಳಿಂದ ಇಂಡಿಯಾ ಸರ್ಕಾರದವರು ಆ ರೀತಿಯಾಗಿ ಆರ್ಡರು ಮಾಡಿದರು.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಹಳ್ಳಿಯಲ್ಲಿ ಹಲ್ಲರ್ ಕೊಡದೆ ಹೋಗುವುದರಿಂದ ನಿರುದ್ಯೋಗ ಹೆಚ್ಚುವುದಿಲ್ಲವೆ ?

(ಉತ್ತರವಿಲ್ಲ.)

ಶ್ರೀ ಪಿ. ಆರ್. ರಾಮಯ್ಯ.—ಇಂಡಿಯಾ ಸರ್ಕಾರದವರು ಸರ್ಕ್ಯುಲರ್‌ಲೋ ಏನೋ ಕಳುಹಿಸಿದ್ದಾರೆಂದು ಹೇಳಿದಿರಲ್ಲಾ, ಅದನ್ನು ಯಾವಾಗ ಜಾರಿಗೆ ತರುವುದು?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಜಾರಿಗೆ ತಂದಿದೆ ; ಈಗ ಅದು ಜಾರಿಯಲ್ಲದೆ. ಅದರ ಪ್ರಕಾರ ಇರುವ ನಿರ್ಬಂಧ ಹೋಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

Pending the approval of their sanction, I propose issuing order for the issue of licences.

ಶ್ರೀ ಪಿ. ಆರ್. ರಾಮಯ್ಯ.—ಹಲ್ಲರ್‌ನಲ್ಲಿ ಅಕ್ಕಿಮಾಡುವುದನ್ನು ಕಡಮೆಮಾಡಿ ಗೃಹಕೈಗಾರಿಕೆ ಮುಂತಾದ್ದನ್ನು ಹೆಚ್ಚಿಸಲು ಇಂಡಿಯಾ ಸರ್ಕಾರದವರು ಈ ಒಂದು ನೀತಿಯನ್ನು ಜಾರಿಗೆ ತಂದಿರಬೇಕಲ್ಲವೆ ?

Mr. SPEAKER.—That was the question put by Sri Nagappa Setty, and it is answered.

ಶ್ರೀ ಎಚ್. ಸಿದ್ದವೀರಪ್ಪ.—I want to make the position very clear. ಆ ಕಾರಣದಿಂದ ಹಲ್ಲರುಗಳನ್ನು ನಿಲ್ಲಿಸಬೇಕೆಂದು ಇಂಡಿಯ ಸರ್ಕಾರ ಆರ್ಡರು ಮಾಡಿರಲಿಲ್ಲ. ಹಲ್ಲರ್ ಇದ್ದರೆ ಬೇರೆ ಕಡೆ ಹೋಗುವುದಕ್ಕೆ ಅವಕಾಶವಾಗುತ್ತದೆ, ರೈಸ್ ಕಂಟೆಂಟ್ಸ್ ಕಡಮೆಯಾಗುತ್ತದೆ, ಇದರಿಂದ ದೇಶದಲ್ಲಿ ಆಹಾರದ ಅಭಾವ ಬರುತ್ತದೆ ಎಂಬ ಕಾರಣಗಳಿಂದ ಹಾಗೆ ಆರ್ಡರು ಮಾಡಿದರು.

Sri K. PUTTASWAMY.—Is it a fact that the Government have received a communication very recently touching on this subject, Sir ?

Sri H. SIDDAVEERAPPA.—I want notice for that.

Sri K. PUTTASWAMY.—Has it come to the notice of the Government that several persons have already invested their money on hullers and they have not been able to get licences to instal them ?

Sri H. SIDDAVEERAPPA.—Yes, I know perfectly that there is a lot of inconvenience to some people. I want to see that as far as possible, it is redressed.

Mr. SPEAKER.—

Questions 17, 29, 501 and 274 may all be taken up together as they are of the same nature.

ಶ್ರೀ ಕಡಿದಾಳ್ ಮಂಜಪ್ಪ.—'Under submission' ಎಂಬುದಕ್ಕೆ 'ವರದಿ ಒಪ್ಪಿಸಲ್ಪಟ್ಟಿದೆ' ಎಂದು ಕನ್ನಡದ ಪ್ರತಿಯಲ್ಲಿ 29ನೆಯ ಪ್ರಶ್ನೆಯ ಉತ್ತರದಲ್ಲಿ ಮುದ್ರಣವಾಗಿದೆ. ಅದನ್ನು 'ಒಪ್ಪಿಸಲ್ಪಡುವುದರಲ್ಲಿದೆ' ಎಂದು ತಿದ್ದಿಕೊಳ್ಳಬೇಕು.

Sales-Tax

Q.—17. Sri S. KARIAPPA (Virupakshapura).—

Will the Government be pleased to state :—

(*a*) whether the final recommendations from the Sales-Tax Committee have been received ;

(*b*) if not, when it is likely to be received ;

(*c*) whether the recommendations of the Committee will be given effect to from the next financial year ?

A.—Sri KADIDAL MANJAPPA (Minister for Revenue and Public Works)—

(*a*) The report is under submission to Government.

(*b*) Expected to be received very soon.

(*c*) Does not arise at this stage in view of replies to (*a*) and (*b*).

Q.—29. Sri B. MADHAVACHAR (Bhadravathi).—Will the Government be pleased to state:—

(*a*) whether the committee appointed to examine the question of revising the Sales-Tax System has submitted the Report;

(*b*) if so, whether copies of the said report will be made available to Members ?

A.—Sri KADIDAL MANJAPPA (Minister for Reveuue and Public Works).—

(*a*) The Report of the Committee is under submission to Government.

(*b*) Yes, after the Report is considered by Government.

Q.—501. Srimathi BELLARY SIDDAMMA (Davangere).—Will the Government be pleased to state:—

(*a*) whether it has come to their knowledge that the present system of collecting the sales-tax has much discouraged the merchant class in their business;

(*b*) the steps, if there are any, taken by them for revising the said taxation scheme ?

A.—Sri KADIDAL MANJAPPA (Minister for Revenue and Public Works).—

(*a*) and (*b*). On representations made about the hardships caused by the assessment of Sales-tax Government have constituted a Committee to examine the working of the Sales-tax Act and to suggest measures for removing defects, drawbacks and hardships, if any, in its working. The Committee has after examining the several aspects of the question and consulting the representatives of the mercantile and other interests in the State, drawn up its Report which is now under submission to Government. The Committee's recommendations will be examined by Government and a Bill for effecting suitable amendments in the Sales-tax Act brought up before the Legislature shortly.

Q.—274. Sri M. CHIKKALINGAIAH (Malavalli—Scheduled Castes).—Will the Government be pleased to state:—

(*a*) when the Sales-tax Department was started;

(*b*) whether it is a technical department; and

(*c*) if so, whether all the officers working in the Department are trained or qualified in that Department ?

A.—Sri KADIDAL MANJAPPA (Minister for Revenue and Public Works).—

(*a*) In September 1948.

(*b*) No.

(*c*) Does not arise in view of reply to (*b*) above.

ಶ್ರೀ ಎಸ್. ಕರಿಯಪ್ಪ.—ಈಗ ಏನಾದರೂ ಸೇಲ್ಸ್ ಟ್ಯಾಕ್ಸ್ ಕಮಿಟಿ ವರದಿ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇವೊತ್ತು ನರ್ಕಾರಕ್ಕೆ ವರದಿ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಈ ಮಧ್ಯೆ ಒಂದು Interim Report ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಆ ನಮಿತಿಯವರು ಶಿಫಾರ್ಸುಮಾಡಿರುವ ಮುಖ್ಯಾಂಶಗಳು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಮಂತ್ರಿಗಳೇ ಆ ನಮಿತಿಯ ಛೇರ್ಮನ್‌ರಾಗಿದ್ದ ಪ್ರಯುಕ್ತ ಆ ನಮಿತಿಯವರ ಮುಖ್ಯಾಂಶಗಳು ನನಗೆ ಗೊತ್ತಿದೆ.

ಶ್ರೀ ಎಸ್. ಕರಿಯಪ್ಪ.—ಅವುಗಳ್ಯಾವುವು ಎಂಬುದನ್ನು ತಿಳಿಸಲು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವು ನರ್ಕಾರದ ಪರಿಶೀಲನೆಯಲ್ಲಿವೆ.

Mr. SPEAKER.—It is stated that it is under consideration.

ಶ್ರೀ ಎಸ್. ಕರಿಯಪ್ಪ.—ಅನೇಕ ಘಟ್ಟಗಳಲ್ಲಿ ಸೇಲ್ಸ್‌ಟ್ಯಾಕ್ಸ್ ಈಗ ಹಾಕುತ್ತಿರುವುದನ್ನು ಬದಲಾಯಿಸಿ ಉತ್ತಮವಾದ ಮಾರ್ಗವನ್ನು ಕಂಡುಹಿಡಿಯುವುದಕ್ಕಾಗಿ ಈ ನಮಿತಿಯನ್ನು ಏರ್ಪಡಿಸಲಾಯಿತಲ್ಲವೇ ?